ಆ. ಮೃತಪಟ್ಟವರ ಸಂಖ್ಯೆ 8.

ತಾಲ್ಲೂಕು	ಮೃತಪಟ್ಟವರ ಸಂಖ್ಯೆ
ಮಂಗಳೂರು	6
ಬಂಟ್ವಾಳ	1
ಬೆಳ್ತಂಗಡಿ	1

ಇ. ಹಾನಿಯಾದ ಸ್ಥಿರಚರ ಸೊತ್ತುಗಳ ಒಟ್ಟು ಅಂದಾಜು ಮೊತ್ತ ರೂ.1,21,73,312-00

ತಾಲ್ಲೂಕು	ಅಂದಾಜು ಹಾನಿ (ರೂ.ಗಳಲ್ಲಿ)
ಮಂಗಳೂರು	1,17,34,337-00
ಪುತ್ತೂರು	86,725-00
ಉಡುಪಿ	84,650-00
ಸೂಳ್ಯ	93,145-00
ಬೆಳ್ತಂಗಡಿ	8,000-00
ಬಂಟ್ವಾಳ	1,66,455-00

ಈ. ಹೌದು.

ತಾಲ್ಲೂಕು	ನೀಡಲಾದ ಪರಿಹಾರ ಧನ (ರೂ.ಗಳಲ್ಲಿ)
ಮಂಗಳೂರು	38,28,228-00
ಪುತ್ತೂರು	44,200-00
ಉಡುಪಿ	35,825-00
ಸೂಳ್ಯ	66,990-00
ಬೆಳ್ತಂಗಡಿ	7,610-00
ಬಂಟ್ವಾಳ	1,29,740-00
ಒಟ್ಟು ರೂ.	41,12,593-00

ಆಡಳಿತ ಸುಧಾರಣಾ ಇಲಾಖೆಯಿಂದ ವಾಹನಗಳ ಖರೀದಿ

1235 (2023): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991ನೇ ಜನವರಿಯಿಂದ ಈವರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಖರೀದಿ ಮಾಡಿರುವ ವಾಹನಗಳ ಸಂಖ್ಯೆ ಎಷ್ಟು; (ಅವುಗಳ ವಿವರ ನೀಡುವುದು);

ಆ. ಆ ರೀತಿ ಖರೀದಿ ಮಾಡಿದ ವಾಹನಗಳಿಗೆ ಎಷ್ಟು ಖರ್ಚು ಮಾಡಲಾಗಿದೆ;

ಇ. ಇದರಿಂದಾಗಿ ಮಿತವ್ಯಯದ ಪಾಲನೆಗೆ ತೊಂದರೆಯಾಗಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಮಾರುತಿ 1000	03
ಪ್ರೀಮಿಯರ್ 118ಎನ್ಇ	04
ಅಂಬಾಸಿಡರ್	30 (ಕಾರ್ಯದರ್ಶಿಗಳಿಗೆ ಒದಗಿಸಿರುವ ವಾಹನಗಳು ಸೇರಿದಂತೆ)
ಒಟ್ಟು	64

ಆ. ರೂ.1,70,55,230–00

ಇ. ಮಿತವ್ಯಯ ಕ್ರಮಗಳನ್ನು ಗಮನದಲ್ಲಿಟ್ಟುಕೊಂಡು, ತುರ್ತು ಅಗತ್ಯತೆಗಳಲ್ಲಿ ಹಾಗೂ ಹಳೆ:ಅನುಪಯುಕ್ತ ವಾಹನಗಳ ಬದಲಿಗೆ ಮಾತ್ರ ಹೊಸ ವಾಹನಗಳನ್ನು ಖರೀದಿಸಲಾಗಿದೆ.

ಕನ್ನಡ ಭಾಷಾ ಅಭಿವೃದ್ಧಿಗೆ ಸರ್ಕಾರದ ಕ್ರಮಗಳು

1236 (138): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ರಾಜ್ಯದಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಸರ್ಕಾರ ಈವರೆಗೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದೆ;

ಆ. ತೆಗೆದುಕೊಂಡಿದ್ದಲ್ಲಿ, ಗುರಿ ಸಾಧನೆಯ ಹಂತಕ್ಕೆ ತಲುಪಿದೆಯೆ;

ಇ. ಕಾರ್ಯಕ್ರಮ ಯಶಸ್ವಿಗೆ ಏನಾದರೂ ಅಡಚಣೆಗಳಿವೆಯೆ ಹಾಗೂ ಇದ್ದಲ್ಲಿ ಅದು ಯಾವುದು;

ಈ. ಕಾರ್ಯಕ್ರಮದ ಅನುಷ್ಠಾನಕ್ಕೆ ಸಾಕಷ್ಟು ಹಣದ ಬಿಡುಗಡೆ ಆಗಿದೆಯೆ ಹಾಗೂ ಅದರ ಮೊತ್ತವೆಷ್ಟು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡೆ ರಾಜ್ಯ ಸಚಿವರು):–

ಅ. ಅಡಳಿತ ಭಾಷೆಯ ಅನುಷ್ಠಾನ ಮತ್ತು ಕನ್ನಡ ಅಭಿವೃದ್ಧಿಗಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ತೆಗೆದುಕೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ಗುರಿಸಾಧನೆ ತಲುಪಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

ಇ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ. 1992–93ನೇ ಸಾಲಿನಲ್ಲಿ ರೂ.11.13 ಲಕ್ಷ ಬಿಡುಗಡೆ ಮಾಡಲಾಗಿದೆ. 1993–94ನೇ ಸಾಲಿನ ಆಯವ್ಯಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಯೋಜನೆ ಇತ್ಯಾದಿಗಳಿಗೆ ಹಣ ಒದಗಿಸುವ ಬಗ್ಗೆ ಕ್ರಮಕ್ಕೆಗೊಳ್ಳಲಾಗುತ್ತಿದೆ.